# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 236

ಸದಸ್ಯರ ಹೆಸರು : ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 02-02-2021

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಮಂಡ್ಯ ಜಿಲ್ಲೆ, ಮಂಡ್ಯ ಹಾಗೂ ತಾಲ್ಲೂಕು ಕಸಬಾ ಹೋಬಳಿ ಬೆಳ್ಳೂರು, ಬಿ.ಗೌಡಗೆರೆ ಗ್ರಾಮದ ವ್ಯಾಪ್ತಿಯಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ಜಮೀನು ಇದೆ; ಜಮೀನಿನ ವಿಸ್ತೀರ್ಣ ಹಾಗೂ ಸರ್ವೆ ನಂಬರ್ ಎಷ್ಟು; (ವಿವರ ನೀಡುವುದು) | ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಬೆಳ್ಳೂರು ಬಿ.ಗೌಡಗೆರೆ ಗ್ರಾಮದಲ್ಲಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಡಿ ಸರ್ವೆ ನಂಬರ್: 337ರಲ್ಲಿ 4.05 ಎಕರೆ ವಿಸ್ತೀರ್ಣದ ಜಮೀನು ಇರುತ್ತದೆ. |
| ಆ | ಆ ಜಮೀನು ಬಿ.ಗೌಡಗೆರೆ ಗ್ರಾಮಕ್ಕೆ ಯಾವ ಉದ್ದೇಶಕ್ಕೆ ಹಾಗೂ ಯಾವಾಗ ಮಂಜೂರಾಗಿದೆ; | ಸರ್ಕಾರದ ಆದೇಶ ಸಂಖ್ಯೆ ಎಲ್.ಎನ್.ಡಿ.(1)ಸಿ.ಆರ್ 228/95-96 ದಿ:11.09.1995 ರಲ್ಲಿ ಸಾರ್ವಜನಿಕ ತೋಟಗಾರಿಕೆ ಮತ್ತು ಉದ್ಯಾನವನಕ್ಕಾಗಿ 4.05 ಎಕರೆ ಜಮೀನನ್ನು ತೋಟಗಾರಿಕೆ ಇಲಾಖೆಗೆ ಮಂಜೂರು ಮಾಡಲಾಗಿರುತ್ತದೆ. |
| ಇ | ಸದರಿ ಉದ್ದೇಶಕ್ಕೆ ಅನುದಾನ ಬಿಡುಗಡೆಯಾಗಿದೆಯೇ; ಹಾಗಿದ್ದರೆ, ಯಾವ ಕಾಮಗಾರಿ ಹಾಗೂ ಹಣದ ಮೊತ್ತ ಎಷ್ಟು; | ಹೌದು.<br>ಸದರಿ ಕ್ಷೇತ್ರದ ಸಂರಕ್ಷಣೆಗೆ ಮುಳ್ಳುತಂತಿ ಖರೀದಿಗಾಗಿ ರೂ.9770/-ಗಳನ್ನು ವೆಚ್ಚ ಭರಿಸಲಾಗಿರುತ್ತದೆ. |
| ಈ | ಸದರಿ ಜಮೀನನ್ನು ಸರ್ಕಾರಿ ಶಾಲೆಗೆ ಅಥವಾ ಸಮುದಾಯ ಭವನ ನಿರ್ಮಾಣಕ್ಕೆ ಅವಶ್ಯಕತೆ ಇರುವುದರಿಂದ ಸಂಬಂಧಿಸಿದ ಇಲಾಖೆಗೆ ಹಸ್ತಾಂತರ ಮಾಡುವ ಬಗ್ಗೆ ಸರ್ಕಾರದ ಅಭಿಪ್ರಾಯವೇನು? | ಸದರಿ ಜಮೀನು ತೋಟಗಾರಿಕೆ ಇಲಾಖೆಗೆ ಅವಶ್ಯಕವಿದ್ದು, ಭೂಮಿಯನ್ನು ಸಮತಟ್ಟು ಮಾಡಿ ಕ್ಷೇತ್ರದಲ್ಲಿ ತೆಂಗು ಸಸ್ಯಾಭಿವೃದ್ಧಿ ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಉದ್ದೇಶಿಸಲಾಗಿದೆ. |

**Horti-39 HGM 2021**

(ಆರ್.ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ

ಸಚಿವರು